## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.


# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ಸರ್ವಧಾರಿ ಸಂ|| ಭಾದ್ರಪದ ಮಾಸ ಸಂಪುಟ - ೨೩

ಸೆಪ್ಟೆಂಬರ್ ೨೦೦೮ ಸಂಚಿಕೆ - ೦೯


# How much does God want?

Religious devotion is a powerful driving force. Hundreds of millions give hard-earned money to religious places or causes without thinking twice, rich and non-rich equally. And the adornment of idols and of places of worship has always been a matter of genuine absorption, driven by real feeling. That the faithful get a needed feeling of fulfillment, of peace, from such offerings can't be denied.

The more famous the shrine, the greater the , willingness to give, to expect the shrine and its objects of worship to be looked after unsparingly. Famous shrines are, thus, always overflowing with money given by the faithful. Tirupati's hundis yield an average inflow of Rs 200 billion a year, and an addition 10-odd kg of gold ornaments every week, to add to the eight-odd tonnes of ornaments already in the treasury for adorning the deities. This is typical; despite spending on education, charity, philanthrophy, pilgrim facilities and so forth, such shrines have an invariable problem of utilising the gushing wealth. Thus the news from the famous Somnath temple in Gujarat, that the managing trust has decided to embellish all the temple's

110 pillars with plates of gold, and later the temple spire and idols, too.

Who can possibly object? We do not - it is their own money and spent for a public purpose - but the news does make us pause. Consider, too, last month's news item about various items of jewellery allegedly missing or pilfered from the Tirupati shrine, and discovered only after a long passage of time, partly because it was difficult to keep track of such a hoard.

Many temple trusts keep racking their brains to think up more and more ways of costly adornment, in the fixed belief that this pleases the Lord and propels yet more peace and goodwill among devotees. Yet, no faith, as far as we know, has divinity demanding such returns as a requirement for blessings; there's more than one touching story to the contrary, in both formal doctrine and folk tale.

We are certain that the trustees at Tirupati, at Somnath and at the tens of thousands of other places where people flock to get solace or give thanks or to feel reassured are all motivated by the purest of motives in their drive to adorn and bejewel. Still, we wonder if the Lord wouldn't be just as pleased if more of such money was spent on something else.







# ಅಧ್ಯಕ್ಷನುಡಿ

ಸಂಘದ ಮುಖ್ಯ ಯೋಜನೆಗಳಲ್ಲೊಂದಾದ ವೃದ್ಧಾಶ್ರಮದ ನಿರ್ಮಾಣ ಪ್ರಾರಂಭವಾಗಿದ್ದು ಪೂರಕ ಕಾರ್ಯಗಳು ಕ್ರಮೇಣ ರೂಪತಾಳುತ್ತಿವೆ. ಅನೇಕ ಮಹನೀಯರು ಈಗಾಗಲೇ ಸಹಾಯ ಹಸ್ತ ನೀಡಿದ್ದಾರೆ. ಮುಖ್ಯ ಬೆಳವಣಿಗೆಯೊಂದರಲ್ಲಿ ವೃದ್ಧಾಶ್ರಮದ ಸ್ಥೂಲ ಕಟ್ಟಡದ **(Super Structure)** ಪ್ರಾಯೋಜಕರಾಗಲು ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ಮುಂದೆ ಬಂದಿದ್ದು ನಮ್ಮ ಉತ್ಸಾಹವನ್ನು ಇಮ್ಮಡಿಯಾಗಿಸಿದೆ. ಶ್ರೀ ಬಿ.ಎನ್.ವಿ. ಅವರ ಉದಾರ ಮನೋಭಾವವು ಜನಜನಿತವಾಗಿದ್ದರೂ ಅವರ ಈ ಕೊಡುಗೆಯು ನಮ್ಮನ್ನು ಮೂಕವಿಸ್ಮಿತರನ್ನಾಗಿಸಿದೆ. ಶ್ರೀಯುತರಿಗೆ ಹೃದಯಪೂರ್ವಕ ವಂದನೆಗಳನ್ನು ಹೇಳುತ್ತ ವೃದ್ಧಾಶ್ರಮಕ್ಕೆ ಬೇಕಾಗಿರುವ ಸಲಕರಣೆಗಳು, ಪೀಠೋಪಕರಣಗಳು ಇತ್ಯಾದಿ ಅವಶ್ಯಕತೆಗಳನ್ನು ನಮ್ಮ ಬಾಂಧವರಿಂದ ಪಡೆದುಕೊಳ್ಳಬೇಕಾಗಿರುವುದರಿಂದ ದಾನಿಗಳು ಮುಂದೆ ಬರಬೇಕಾಗಿ ಕೇಳಿಕೊಳ್ಳುತ್ತೇವೆ.

ವೃದ್ಧಾಶ್ರಮಕ್ಕೆ ಸೂಕ್ತ ಹೆಸರನ್ನು ಸೂಚಿಸಲು ತಿಳಿಸಿದ್ದೆವಷ್ಟೆ, ಅದಕ್ಕೆ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ಸದ್ಯದಲ್ಲಿಯೇ ಅದರ ಆಯ್ಕೆಯಾಗಲಿದೆ. ಅಂತೆಯೇ ಮೇಲ್ವಿಚಾರಕರ ನೇಮಕಾತಿಯ ಬಗ್ಗೆಯೂ ಸಂಘವು ತೀರ್ಮಾನಿಸಲಿದೆ. ಮುಂಬರುವ ದಿನಗಳಲ್ಲಿ ವೃದ್ಧಾಶ್ರಮದ ನಿರ್ಮಾಣದ ಬಗ್ಗೆ ಸಾಕಷ್ಟು ಮಾಹಿತಿ – ವಿನಿಮಯ

- ಬೆಳವಣಿಗೆಗಳು ಇರುತ್ತವೆ.

ಮತ್ತೊಂದು ಸಂತಸದ ಸಂಗತಿಯಿದೆ. ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿದ್ದ ಸಂಕೇತಿ ಬಾಂಧವರ ಸಂಘವೊಂದು 'ಪಶ್ಚಿಮವಾಹಿನಿ ಸಂಕೇತಿ ಸಂಘ' ಎಂಬ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಕಾರಣಾಂತರಗಳಿಂದ ಸ್ಥಗಿತಗೊಳ್ಳಬೇಕಾದ ಸಂದರ್ಭದಲ್ಲಿ ರೂ. 10,000/- ಕೊಡುಗೆಯನ್ನು ನಮ್ಮ ಸಂಘಕ್ಕೆ ನೀಡಿದೆ. ನಮ್ಮ ಸಂಘದೊಂದಿಗೆ ಸಂಪರ್ಕವನ್ನು ಹೊಂದಿರದಿದ್ದರೂ ನಮ್ಮ ಯೋಜನೆಗಳ ಬಗ್ಗೆ ಮಾಹಿತಿ ಹೊಂದಿದ್ದು ಈ ಮೊತ್ತವನ್ನು ವಿದ್ಯಾರ್ಥಿವೇತನ ನಿಧಿಗೆ ಸೇರಿಸಬೇಕೆಂದು ಸೂಚಿಸಲಾಗಿದೆ. ದೂರ ಬಹಳವಿದ್ದರೂ ಈ ಔದಾರ್ಯದಿಂದ ನಮ್ಮ ಹೃದಯಕ್ಕೆ ಹತ್ತಿರವಾಗಿರುವ ಅಮೇರಿಕದ ಈ ಸಂಘಕ್ಕೂ ಅದರ ಕಾರ್ಯಕರ್ತರಿಗೂ ಸಂಘದ ಹಾರ್ದಿಕ ಕೃತಜ್ಞತೆಗಳು.

- ಎಂ. ನರಸಿಂಹನ್

## ವೃದ್ಧಾಶ್ರಮಕ್ಕೆ ಸೂಕ್ತ ಹೆಸರು ಸೂಚಿಸಿ

ಸದ್ಯದಲ್ಲಿಯೇ ಕಾರ್ಯಾರಂಭ ಮಾಡಲಿರುವ ಸಂಘದ ವೃದ್ಧಾಶ್ರಮಕ್ಕೆ ''ಜ್ಯೋತಿ'' ಎಂಬ ಹೆಸರನ್ನು ಒಳಗೊಂಡ ಸೂಕ್ತ ಹೆಸರನ್ನು ಸೂಚಿಸಲು ಸದಸ್ಯರನ್ನು ಸಂಘವು ಕೋರುತ್ತದೆ.







# ಕಾರ್ಯದರ್ಶಿ ಕಾಲಂ

ಎಲ್ಲಾ ಸಂಕೇತಿ ಬಂಧುಗಳಿಗೂ ಗೌರೀಗಣೇಶನ ಹಬ್ಬದ ಮತ್ತು ಮುಂಬರುವ ನವರಾತ್ರಿಯ ಶುಭಾಶಯಗಳು.

ನಿಮಗೆಲ್ಲರಿಗೂ ಈಗಾಗಲೇ ತಿಳಿದಿರುವಂತೆ ನಮ್ಮ ವೃದ್ಧಾಶ್ರಮದ ಕಟ್ಟಡದ ಕೆಲಸ ಪ್ರಾರಂಭವಾಗಿದೆ. ನಮ್ಮ ಈ ವೃದ್ಧಾಶ್ರಮವನ್ನು ಮಾಡಬೇಕೆಂದುಕೊಂಡಾಗ ಹಲವಾರು ಪರ ಮತ್ತು ವಿರೋಧದ ದನಿಗಳು ಇದ್ದವೆಂಬುದು ನಿಮ್ಮೆಗೆಲ್ಲರಿಗೂ ಆಶ್ಚರ್ಯವೆನಿಸಬಹುದು.

ಮಕ್ಕಳು ತಂದೆ ತಾಯಿಗಳನ್ನು ತಿರಸ್ಕರಿಸುವ ಅಥವಾ ಕಡೆಗಣಿಸುವ ಒಂದು ದುಷ್ಟಸಂಪ್ರದಾಯಕ್ಕೆ ಸಂಘವೇ ಮೇಲ್ಪಂಕ್ತಿ ಹಾಕಿಕೊಟ್ಟಂತಾಗುತ್ತದೆ. ಆದ್ದರಿಂದ ಸಂಘವು ಇಂಥಾ ಆಶ್ರಮವನ್ನು ಮಾಡಬಾರದು ಎಂಬುದು ಹಲವರ ಅಭಿಪ್ರಾಯವಾಗಿತ್ತು. ಹೀಗಾಗಿ ನಮ್ಮ ವೃದ್ಧಾಶ್ರಮ ಚೆನ್ನಾಗಿ ನಡೆಯಲಿ ಎಂದು ಆಶಿಸುವುದೂ ಒಂದು ರೀತಿಯಲ್ಲಿ ತಪ್ಪೇ ಆಗುತ್ತದೆ. ಒಂದು ವಿದ್ಯುತ್ ಚಿತಾಗಾರವನ್ನು ಪ್ರಾರಂಭಿಸಿದ ಮಂತ್ರಿ ''ಈ ಚಿತಾಗಾರ ದಿನದ 24 ಘಂಟೆಗಳೂ ಕಾರ್ಯ ನಿರ್ವಹಿಸಿ ಹೆಚ್ಚು ಅಭಿವೃದ್ಧಿಗೆ ಬರಲಿ, ಇನ್ನೂ ಹೆಚ್ಚು ಚಿತಾಗಾರಗಳನ್ನು ಪ್ರಾರಂಭಿಸುವಂತಾಗಲಿ'' ಎಂದು ಆಶಿಸಿದಂತಾಗುತ್ತದೆ.

ಆದರೆ ಈ ವಿಷಯದಲ್ಲಿ ನಮ್ಮ ಸಂಘದ ಅಭಿಪ್ರಾಯವೇ ಬೇರೆಯಾಗಿದೆ. ನಶಿಸಿ ಹೋಗುತ್ತಿರುವ ಸಾಮಾಜಿಕ ಪರಂಪರೆಗಳು ಉಳಿಯುವಂತಾಗಬೇಕು. ಒಟ್ಟು ಕುಟುಂಬದ, ತುಂಬು ಸಂಸಾರದ ಸಂಪ್ರದಾಯ ಪುನರಾರಂಭವಾಗಬೇಕು. ನಮ್ಮ ಸಮಾಜದ ಹಿರಿಯ ಬಂಧುಗಳು, ಅವರವರ ಮಕ್ಕಳು, ಮೊಮ್ಮಕ್ಕಳೊಡನೆ ಅವರವರ ಮನೆಗಳಲ್ಲಿ ನಗುನಗುತ್ತಾ ತಮ್ಮ ಜೀವನವನ್ನು ಶಾಂತಿ, ನೆಮ್ಮದಿಯಿಂದ ಕಳೆಯಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಇಂದಿನ ಸಮಾಜ ತೀವ್ರವಾದ ಬದಲಾವಣೆಗೆ ಒಳಗಾಗುತ್ತಿದೆ. ಇದಕ್ಕೆ ನಮ್ಮ ಸಂಕೇತಿಗಳೂ ಹೊರತಲ್ಲ. ಹಿಂದಿನ ಕಾಲದಲ್ಲಿ ಪ್ರತಿ ದಂಪತಿಗಳಿಗೂ 4-5 ಮಕ್ಕಳಿರುವುದು ಸಾಮಾನ್ಯವಾಗಿತ್ತು. ಈಚೆಗೆ ಪ್ರತಿ ದಂಪತಿಗಳಿಗೆ ಒಂದು ಮಗುವಿರುವುದೇ ಉಚಿತ ಎಂಬ ಅಭಿಪ್ರಾಯ ಬಂದಿದೆ.

ಕೆಲವರು ಇನ್ನೂ ಮುಂದೆ ಹೋಗಿ 'DINK' (Double Income No Kids) ಅಭಿಪ್ರಾಯಕ್ಕೆ ಬರುತ್ತಿದ್ದಾರೆ. ದಾಂಪತ್ಯ ಜೀವನವನ್ನು ನಡೆಸಿ, ಮಕ್ಕಳನ್ನು ಹಡೆದು, ಅವರನ್ನು ಸಾಕಿ, ಸಲಹಿ, ಸತ್ಪ್ರಜೆಗಳನ್ನಾಗಿ ಬೆಳೆಸುವ ಪವಿತ್ರವಾದ ಕೆಲಸವನ್ನು ಸ್ತ್ರೀಸ್ವಾತಂತ್ರ್ಯ, ಸಮಾನತೆಯ ಹೆಸರಿನಲ್ಲಿ ಕಡೆಗಣಿಸಲಾಗುತ್ತಿದೆ. ದೊಡ್ಡ ಮಲ್ಟಿನ್ಯಾಷನಲ್ ಕಂಪನಿಗಳಲ್ಲಿ ಬೆಳಗ್ಗಿನಿಂದ ಸಂಜೆವರೆವಿಗೂ ಅಥವಾ ಸಂಜೆಯಿಂದ ಬೆಳಗಿನವರೆವಿಗೂ ಕೂಲಿ ಕೆಲಸವನ್ನು ಮಾಡಿ ತಿಂಗಳಿಗೆ ಹತ್ತಾರು ಸಾವಿರ ರೂಗಳನ್ನು ತರುವುದೇ ಅತೀ ಪವಿತ್ರವಾದ ಕೆಲಸ ಎಂದು ಭಾವಿಸಲಾಗುತ್ತಿದೆ. ಎಳೇ ಮಕ್ಕಳನ್ನು ಬೇಬಿ ಕೇರ್ ಸೆಂಟರ್‌ಗಳೆಂಬ ಕೃತಕ ವಾತಾವರಣದಲ್ಲಿ ಬಿಟ್ಟು, ತಂದೆ ತಾಯಿಗಳ ವಾತ್ಸಲ್ಯ ಮತ್ತು ಪ್ರೀತಿಯಿಂದ ವಂಚಿತರನ್ನಾಗಿಸಿ, ಕೇವಲ ಹಣದ ಹಿಂದೆಯೇ ಓಡುತ್ತಿರುವ ಇಂದಿನ ಯುವ ಜನರಿಗೆ ತಮ್ಮ ವಯೋವೃದ್ಧ ತಂದೆ ತಾಯಿಗಳನ್ನು ಪ್ರೀತಿಯಿಂದ ನೋಡಿಕೊಳ್ಳುವ ತಾಳ್ಮೆ ಎಲ್ಲಿದೆ? ಅದರಲ್ಲೂ ಈ ನಡುವೆ ಪ್ರತಿಯೊಬ್ಬರಿಗೂ ವಿದೇಶಗಳಲ್ಲಿ ಹೋಗಿ ನೆಲೆಸಬೇಕೆಂಬ ಮಹದಾಸೆ ಬೇರೆ. ನಮ್ಮ ಭಾರತೀಯ ಸಮಾಜ ಈ ದಿನ ಇಂಥಾ ಕವಲು ದಾರಿಯಲ್ಲಿದೆ ಎಂಬುದು ನನ್ನ ಅಭಿಪ್ರಾಯ.

ಹೀಗಿರುವಾಗ ಎಷ್ಟೇ ಹಣವಿದ್ದರೂ, ನೋಡಿಕೊಳ್ಳುವವರಿಲ್ಲದೆ ಮತ್ತು ನೋಡಿಕೊಳ್ಳುವವರೂ ಇಲ್ಲದೆ ಹಣವೂ ಇಲ್ಲದಿರುವ ನಮ್ಮ ಸಮಾಜದ ಹಿರಿಯರಿಗೆ ಸಹಾಯ ಹಸ್ತವನ್ನು ನೀಡುವುದು ನಮ್ಮ ಸಂಘದ ಆದ್ಯ ಮತ್ತು ಪವಿತ್ರವಾದ ಕರ್ತವ್ಯವೆಂಬುದು ನಮ್ಮ ಅಭಿಪ್ರಾಯ. ಈ ಚಿಂತನೆಯೇ ನಮ್ಮದೇ ಆದ ವೃದ್ಧಾಶ್ರಮವನ್ನು ಸ್ಥಾಪಿಸುವ ಚಿಂತನೆಗೆ ಪ್ರೇರಣೆ ನೀಡಿದ್ದು. ಹೀಗಾಗಿಯೇ ವೃದ್ಧಾಶ್ರಮವನ್ನು ಕಟ್ಟುವ ಕೆಲಸ ಪ್ರಾರಂಭಿಸಿರುವುದು. ನಮ್ಮ ಎಲ್ಲ ಹಿರಿಯ ಬಂಧುಗಳೂ ಅವರವರ ಮಕ್ಕಳ ಜೊತೆಯಲ್ಲಿ ನೆಮ್ಮದಿಯಿಂದಿರುವಂತಾದರೆ ಸಂಘಕ್ಕೆ ಸಂತೋಷವೆ. ಆದರೆ ಹಾಗಾಗುವವರೆಗೆ ನಮ್ಮ ಸಂಘಕ್ಕೊಂದು ವೃದ್ಧಾಶ್ರಮ ಅನಿವಾರ್ಯ.

(ಈ ಲೇಖನ ಯಾವುದೇ ಒಂದು ವ್ಯಕ್ತಿಯನ್ನು ಕುರಿತು ಬರೆದಿದ್ದಲ್ಲ)

– ಎಸ್. ಸಿ. ಮಂಜುನಾಥ್





## ಬೆಂಗಳೂರು ಶಾಖೆ

ಆರ್.ಎಸ್. ಶ್ರೀನಿವಾಸಯ್ಯ
ಅಧ್ಯಕ್ಷರು

ಬಿ.ಆರ್.ನರಸಿಂಹಮೂರ್ತಿ
ಗೌ|| ಕಾರ್ಯದರ್ಶಿ

## ಗಣಪತಿ ಮಂಗಳಾರತಿ

**ಸೆಪ್ಟಂಬರ್ 27, 2008ನೇ ಶನಿವಾರ ಸಂಜೆ 4.30ಕ್ಕೆ ಸರಿಯಾಗಿ** ಗಣಪತಿ ಮಂಗಳಾರತಿಯ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮವು ಆರ್.ವಿ. ರಸ್ತೆಯಲ್ಲಿರುವ ಆರ್.ವಿ. ಟೀಚರ್ಸ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ತಮ್ಮೆಲ್ಲರನ್ನೂ ರಂಜಿಸಲು ಹಮ್ಮಿಕೊಂಡಿರುತ್ತೇವೆ. ತಾವೆಲ್ಲರೂ ಸಕಾಲಕ್ಕೆ ಬಂಧು-ಮಿತ್ರ ಪರಿವಾರ ಸಮೇತರಾಗಿ ಆಗಮಿಸಿ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿಸಬೇಕೆಂದು ಪ್ರಾರ್ಥಿಸುತ್ತೇವೆ.

ಕಾರ್ಯಕ್ರಮದ ವಿವರ

## ಈ ವರ್ಷದ ವಿಶೇಷ

**ಸಂಜೆ 4.30ಕ್ಕೆ ಸರಿಯಾಗಿ ತಮಾಷೆ ಆಟಗಳು (ತಮಾಷೆಗಾಗಿ ಮಾತ್ರ ಅಲ್ಲ, ಬಹುಮಾನಕ್ಕಾಗಿ – ವಯೋಮಿತಿಯ ನಿಬಂಧನೆ ಇಲ್ಲ. ಎಲ್ಲರೂ ಭಾಗವಹಿಸಬಹುದು.)**

**ಸಮಯಕ್ಕೆ ಸರಿಯಾಗಿ ಬನ್ನಿರಿ, ಬಹುಮಾನ ಗೆಲ್ಲಿರಿ !!!**

1. ವೇದಘೋಷ 2. ಪ್ರಾರ್ಥನೆ 3. ಸ್ವಾಗತ ಭಾಷಣ
4. ಚಿ|| ಆರ್. ಪಿ. ಪ್ರಶಾಂತ್ ಮತ್ತು ಚಿ|| ಆರ್. ಪಿ. ಪ್ರಮೋದ್ ಅವರಿಂದ ದ್ವಂದ್ವ ವೀಣಾವಾದನ.
5. ನಗೆ ನಾಟಕ – ಸಂಘದ ಸದಸ್ಯರಿಂದ 6. ಬಹುಮಾನ ವಿನಿಯೋಗ
   ನಿರ್ದೇಶನ : ಶ್ರೀ ಬಿ. ಎಸ್. ರಾಮಮೂರ್ತಿ
7. ಮಂಗಳಾರತಿ 8. ಪ್ರಸಾದ ವಿನಿಯೋಗ 9. ವಿಸರ್ಜನೆ

ವಿ.ಸೂ. : ಎಲ್ಲರೂ ಸರಿಯಾದ ಸಮಯಕ್ಕೆ ಬಂದರೆ, ಅಂದುಕೊಂಡಂತೆಯೇ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುತ್ತದೆ. ಆದ್ದರಿಂದ ಸರಿಯಾದ ವೇಳೆಗೇ ಎಲ್ಲರೂ ಬರಬೇಕೆಂದು ನಮ್ಮ ಕೋರಿಕೆ.

# ಶುಭ ಸಮಾಚಾರಗಳು

## ಚೌಲೋಪನಯನ :

| ತಾರೀಖು | ವಟು |
|---|---|
| 08.08.08 ಬೆಂಗಳೂರು | **ಚಿ॥ ರಾ॥ ಸ್ವರೂಪ್ ಆತ್ರೇಯ** (ಶ್ರೀಮತಿ ಮತ್ತು ಶ್ರೀ ಬಿ. ಎಸ್. ವೆಂಕಟೇಶ್ವರ್ ಅವರ ಪುತ್ರ ಹಾಗೂ ಶ್ರೀಮತಿ ವೇದಾ ಮತ್ತು ಶ್ರೀ ಬಿ. ವಿ. ಶ್ರೀಕಂಠ, ಭದ್ರಾವತಿ ಇವರ ಮೊಮ್ಮಗ) |

## ಗೃಹಪ್ರವೇಶ :

| ತಾರೀಖು | |
|---|---|
| 21.08.08 ಬೆಂಗಳೂರು | **ಶ್ರೀಮತಿ ವಿದ್ಯಾ ಮತ್ತು ಶ್ರೀ ಬಿ. ಜಿ. ಕಿರಣ್** (ಶ್ರೀಮತಿ ಸರೋಜಾ ಮತ್ತು ದಿ॥ ಬಿ. ಆರ್. ಗುರುರಾಜ್ ಅವರ ಪುತ್ರ ಹಾಗೂ ಶ್ರೀಮತಿ ಕೌಸಲ್ಯಾಬಾಯಿ ಮತ್ತು ದಿ॥ ಎಸ್. ರಾಜಾರಾಂ ರಾವ್ ಅವರ ಮೊಮ್ಮಗ) |

## ವಿವಾಹ ಮಹೋತ್ಸವ :

| ತಾರೀಖು | ವಧು | ವರ |
|---|---|---|
| 03.08.08 ಬೆಂಗಳೂರು | **ಹ॥ಕುಂ॥ಶೋ॥ ಆರ್.ಪಿ.ದೀಪ್ತಿ** (ಶ್ರೀಮತಿ ಉಷಾ ಮತ್ತು ಶ್ರೀ ಆರ್. ವಿ. ಪ್ರಕಾಶ್ ಅವರ ಪುತ್ರಿ) | **ಚಿ॥ರಾ॥ಹೆಚ್.ಎಲ್.ವಿನೋದ್‌ಕುಮಾರ್** (ಶ್ರೀಮತಿ ಸರಸ್ವತಿ ಮತ್ತು ಶ್ರೀ ಹೆಚ್.ಎಸ್. ಲಕ್ಷ್ಮೀಕಾಂತ ಅವರ ಪುತ್ರ) |
| 08.08.08 ಬೆಂಗಳೂರು | ಹ॥ಕುಂ॥ಶೋ॥ ರೇವತಿ (ದಿ॥ ಸುವರ್ಣ ಮತ್ತು ಶ್ರೀ ಎಸ್.ಸಿ.ಶ್ರೀನಿವಾಸಮೂರ್ತಿ ಅವರ ಪುತ್ರಿ ಹಾಗೂ ಸಾಲಿಗ್ರಾಮದ ದಿ॥ ಸಾವಿತ್ರಮ್ಮ ಮತ್ತು ದಿ॥ ಎಸ್.ಟಿ. ಚನ್ನಪ್ಪಯ್ಯ ಮತ್ತು ಪಿರಿಯಾಪಟ್ಟಣದ ದಿ॥ ಕಮಲಮ್ಮ ಮತ್ತು ದಿ॥ ಬಿಂದು ಮಾಧವಶಾಸ್ತ್ರಿಗಳ ಮೊಮ್ಮಗಳು) | ಚಿ॥ ರಾ॥ ಎಂ. ಎಸ್. ಶ್ರೀಕಾಂತ್ (ಮೈಸೂರಿನ ಶ್ರೀಮತಿ ಪ್ರೇಮಾ ಮತ್ತು ಶ್ರೀ ಶ್ಯಾಮರಾವ್ ಅವರ ಪುತ್ರ) |





| ತಾರೀಖು | ವಧು | ವರ |
|---|---|---|
| 14.08.08 ಬೆಂಗಳೂರು | **ಹ॥ಕುಂ॥ಶೋ॥ಪೂಜಾ ಮಹೇಶ್** (ಶ್ರೀಮತಿ ರೇಖಾ ಮತ್ತು ಶ್ರೀ ಆರ್.ಎಸ್.ಜ್ಯೋತಿರ್ಮಹೇಶ್ ಅವರ ಪುತ್ರಿ ಹಾಗೂ ಶ್ರೀ ಬಿ.ಆರ್. ಸುಬ್ಬರಾವ್ ಅವರ ಮೊಮ್ಮಗಳು) | **ಚಿ॥ ರಾ॥ ವೈ.ವಿ. ಚಂದ್ರಶೇಖರ್** (ಶ್ರೀಮತಿ ಭಾರ್ಗವಿ ಮತ್ತು ಶ್ರೀ ವೈ.ವಿ.ವೈದ್ಯನಾಥ್ ಅವರ ಪುತ್ರ) |
| 14.08.08 ಬೆಂಗಳೂರು | **ಹ॥ಕುಂ॥ಶೋ॥ಡಾ॥ ಸುಮಾ** (ಶ್ರೀಮತಿ ಸಂಧ್ಯಾ ಮತ್ತು ಶ್ರೀ ಮಂಜುನಾಥ್ ಅವರ ಪುತ್ರಿ) | **ಚಿ॥ ರಾ॥ ಡಾ॥ ಪ್ರಶಾಂತ್** ಶ್ರೀಮತಿ ಸುವರ್ಣಾ ಮತ್ತು ಶ್ರೀ ವಿ. ನಾಗರಾಜ ಅವರ ಪುತ್ರ ಹಾಗೂ ದಿ॥ ಮೀನಾಕ್ಷಮ್ಮ ಮತ್ತು ದಿ॥ ಎನ್.ವೆಂಕಟರಾಮಯ್ಯ ಮತ್ತು ಶ್ರೀಮತಿ ಸೀತಾಲಕ್ಷ್ಮೀ ಮತ್ತು ಡಾ॥ ಕೆ. ಮಂಜುನಾಥಯ್ಯ ಅವರ ಮೊಮ್ಮಗ) |
| 14.08.08 ಬೆಂಗಳೂರು | **ಹ॥ಕುಂ॥ಶೋ॥ನಂದಿತಾ ಭಾರದ್ವಾಜ್** (ಶ್ರೀಮತಿ ಸುನಂದಾ ಮತ್ತು ಶ್ರೀ ಹೆಚ್.ಎನ್.ಕೇಶವಮೂರ್ತಿ ಅವರ ಪುತ್ರಿ) | **ಚಿ॥ ರಾ॥ ಮಧುಸೂದನ್ ದೀಕ್ಷಿತ್ (ಶರತ್)** (ಶ್ರೀಮತಿ ಸರಸ್ವತಿ ಮತ್ತು ಶ್ರೀ ಆರ್.ಎಸ್.ಜಗದೀಶ್ ಅವರ ಪುತ್ರ ಹಾಗೂ ಶ್ರೀಮತಿ ವಿಮಲಮ್ಮ ಮತ್ತು ದಿ॥ ಆರ್.ವೈ.ಶ್ರೀನಿವಾಸಮೂರ್ತಿ ಮತ್ತು ದಿ॥ ಆರ್.ಡಿ. ಸುಬ್ಬರಾಯಪ್ಪ ಅವರ ಮೊಮ್ಮಗ) |
| 18.08.08 ಬೆಂಗಳೂರು | **ಹ॥ಕುಂ॥ಶೋ॥ಅಮೃತಾ ವಲ್ಲಭ** (ಶ್ರೀಮತಿ ಶಾಂತಲಕ್ಷ್ಮೀ ಮತ್ತು ದಿ॥ ಎಸ್.ಎ.ಶ್ರೀಪಾದ ಶ್ರೀ ವಲ್ಲಭ ಅವರ ಪುತ್ರಿ ಹಾಗೂ ದಿ॥ ಕಾಶಮ್ಮ ಮತ್ತು ದಿ॥ ಎಸ್.ಆರ್.ಅಶ್ವತ್ಥ ನಾರಾಯಣರಾವ್ ಅವರ ಮೊಮ್ಮಗಳು) | **ಚಿ॥ ರಾ॥ ಆರ್. ಪ್ರಶಾಂತ್** (ಶ್ರೀಮತಿ ಗೀತಾ ಮತ್ತು ಶ್ರೀ ಕೆ. ರಂಗನಾಥ್ ಅವರ ಪುತ್ರ) |

| ತಾರೀಖು | ವಧು | ವರ |
|---|---|---|
| 28.08.08<br>ಬೆಂಗಳೂರು | **ಹಾ॥ಕುಂ॥ಶೋ॥ಎಸ್.ಎನ್.ಅಕ್ಷರಾ**<br>(ಶ್ರೀಮತಿ ಲೀಲಾ ಮತ್ತು ಶ್ರೀ ಎಸ್.ಜಿ.ನಾಗರಾಜ ಅವರ ಪುತ್ರಿ ಹಾಗೂ ದಿ॥ ಮೀನಾಕ್ಷಮ್ಮ ಮತ್ತು ಸಾಲಿಗ್ರಾಮದ ಶ್ಯಾನುಭೋಗ್ ದಿ॥ ಎಸ್.ಗಂಗಾಧರಯ್ಯನವರ ಮೊಮ್ಮಗಳು) | **ಚಿ॥ ರಾ॥ ಎಸ್.ನರಸಿಂಹ ಪ್ರಸಾದ್**<br>(ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಸತ್ಯನಾರಾಯಣ ಅವರ ಪುತ್ರ) |
| 01.09.08<br>ಚೆನ್ನೈ | **ಹಾ॥ಕುಂ॥ಶೋ॥ ಗಾಯತ್ರೀ**<br>(ಶ್ರೀಮತಿ ಪ್ರೇಮಾ ಮತ್ತು ಶ್ರೀ ಹರವೆ ಸ್ವಾಮಿನಾಥನ್ ಅವರ ಪುತ್ರಿ ಹಾಗೂ ಶ್ರೀಮತಿ ಮತ್ತು ಶ್ರೀ ಹೆಚ್.ವಿ. ರಾಮಚಂದ್ರಯ್ಯ ಅವರ ಮೊಮ್ಮಗಳು) | **ಚಿ॥ ರಾ॥ ಬದ್ರಿ ಪ್ರಸಾದ್**<br>(ಶ್ರೀಮತಿ ಸರೋಜಾ ಮತ್ತು ಶ್ರೀ ಎ.ಎಸ್.ಅನಂತನಾರಾಯಣನ್ ಅವರ ಪುತ್ರ) |

## ಭೀಮರಥ ಶಾಂತಿ :

| ತಾರೀಖು | |
|---|---|
| 06.07.08<br>ಶ್ರೀರಂಗಪಟ್ಟಣ | **ಡಾ॥ ಆರ್.ಚಂದ್ರಶೇಖರ್ ಅವರು ದಿ॥ ಆರ್.ಎಸ್.ರಾಮಸ್ವಾಮಯ್ಯ**<br>(ಅಶ್ವಿನಿ) ಮತ್ತು ದಿ॥ ಸಾವಿತ್ರಮ್ಮ, ಹೊಳೇನರಸೀಪುರ ಅವರ ಪುತ್ರ |

## ಆಗಸ್ಟ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಬಿ. ವಿ. ಪದ್ಮರೇಖಾ | ಬೆಂಗಳೂರು | 8858 | 2028 |
| ಬಿ. ವಿ. ಕೃಷ್ಣಪ್ರಸಾದ್ | ಬೆಂಗಳೂರು | 8859 | 2029 |
| ಎನ್. ಹರೀಶ್ | ಬೆಂಗಳೂರು | 8862 | 2030 |
| ಸಾವಿತ್ರೀ ಹರೀಶ್ | ಬೆಂಗಳೂರು | 8863 | 2031 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಎಸ್. ವೆಂಕಟೇಶ್ವರ್ | ಬೆಂಗಳೂರು | 8854 | 100.00<br>(ಮಗನ ಚೌಲೋಪನಯನ) |





| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಸ್.ಸಿ.ಶ್ರೀನಿವಾಸಮೂರ್ತಿ | ಬೆಂಗಳೂರು | 8855 | 502.00<br>(ಮಗಳ ಮದುವೆ) |
| ಕೆ. ವಿಶ್ವನಾಥ | ಬೆಂಗಳೂರು | 8857 | 101.00<br>(ಗೃಹಪ್ರವೇಶ – ಸತ್ಯನಾರಾಯಣಪೂಜೆ ) |
| ಜಯಂತ್ ಮತ್ತು ಪೂರ್ಣಿಮಾ | ಬೆಂಗಳೂರು | 8865 | 250.00<br>(ಗೃಹಪ್ರವೇಶ) |
| ವಿ. ನಾಗರಾಜ | ಬೆಂಗಳೂರು | 8866 | 150.00<br>(ಮಗನ ಮದುವೆ) |
| ಶಾಂತಲಕ್ಷ್ಮೀ ಕೆ. ಎಸ್. | ಬೆಂಗಳೂರು | 8869 | 200.00<br>(ಮಗಳ ಮದುವೆ) |
| ಆರ್. ಎಸ್. ಜಗದೀಶ್ | ಮೈಸೂರು | 8871 | 101.00<br>(ಮಗನ ಮದುವೆ) |
| ಎಸ್. ಜಿ. ನಾಗರಾಜ | ಬೆಂಗಳೂರು | 8873 | 500.00<br>(ಮಗಳ ಮದುವೆ) |

### ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಕಾಂಟ್ರೆಸ್ ಆಟೋಮೇಷನ್ | ಬೆಂಗಳೂರು | 8870 | 1200.00 |
| ಸುದರ್ಶನ್ ಎಲೆಕ್ಟ್ರಾನಿಕ್ಸ್ | ಬೆಂಗಳೂರು | 8872 | 1200.00 |

### ಸಾಮಾನ್ಯ ವಿದ್ಯಾರ್ಥಿವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಪಶ್ಚಿಮವಾಹಿನೀ ಸಂಕೇತಿ ಸಂಘ | ಯುಎಸ್ಎ | 8856 | 10,000.00 |

### ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎನ್.ನಾಗರಾಜ | ಬೆಂಗಳೂರು | 8864 | 15,000.00<br>(ತಂದೆ ಹೆಚ್.ಎಸ್.ನರಸಿಂಹಯ್ಯ ಅವರ ಸ್ಮರಣಾರ್ಥ) |
| ಶ್ರೀನಿವಾಸ ಆತ್ರೇಯ | ಯುಎಸ್ಎ | 8868 | 4,205.00<br>($ 100.00) |

## ಆಗಸ್ಟ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 02.08.08 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಬಿ.ಎಸ್.ವೆಂಕಟಕೃಷ್ಣಪ್ಪ (ಪತಿ) |
| 02.08.08 ಬೆಂಗಳೂರು | ಶಾಮಣ್ಣ ಆರ್.ಎನ್. | ತಾಯಿ ಲಕ್ಷಮ್ಮ |
| 03.08.08 ಬೆಂಗಳೂರು | ಸೋಮಶೇಖರ ಆರ್.ಎನ್. | ತಂದೆ ಪಿ.ಎನ್. ನಾರಾಯಣಸ್ವಾಮಿ ಶಾಸ್ತ್ರಿ |
| 08.08.08 ಯುಎಸ್ಎ | ವೈದೇಹಿ, ಶಿವಶಂಕರ್ | ಪುತ್ರ ರಾಂ ಶಿವಶಂಕರ್ |
| 08.08.08 ಬಾಂಬೆ | ಹರಿಹರನ್ ಹೆಚ್.ಆರ್. | ತಾಯಿ ಇಂದಿರಮ್ಮ |
| 09.08.08 ಚೆನ್ನೈ | ಆರ್. ಕೆ. ವೆಂಕಟೇಶ್ | ತಂದೆ ಸೀಗೆಕೊರೆ ಕಾವಲ್ ಕೇಶವಮೂರ್ತಿ |
| 11.08.08 ಬೆಂಗಳೂರು | ಕಪಾಲೇಶ್ವರ್ | ತಂದೆ ಹೆಚ್. ಎಸ್. ಶಿವಶಂಕರ್ |
| 12.08.08 ಬಾಂಬೆ | ಕೃಷ್ಣಮೂರ್ತಿ ಆರ್. ವಿ. | ಕಿರಿಯ ಸಹೋದರಿ ಅನ್ನಪೂರ್ಣ |
| 13.08.08 ಬೆಂಗಳೂರು | ಮೂರ್ತಿ ಕೆ.ಎನ್.ಕೆ. | ಕಟ್ಟೇಪುರ ನಾರಾಯಣ ರಾವ್ ಮತ್ತು ಸಾವಿತ್ರಮ್ಮ |
| 15.08.08 ಬೆಂಗಳೂರು | ಕಮಲಾ ಪರಶುರಾಮರಾವ್ | ಮಾವ ಶ್ರೀ ಸುಬ್ಬರಾವ್ |
| 16.08.08 ಬೆಂಗಳೂರು | ವೆಂಕಟರಾಮಯ್ಯ ಬಿ. ಎಸ್. | ಅಜ್ಜಿ ಪುಟ್ಟಲಕ್ಷಮ್ಮ |
| 16.08.08 ಬೆಂಗಳೂರು | ಡಾ|| ವಿಶ್ವೇಶ್ವರಯ್ಯ ಆರ್.ಎನ್. | ತಾಯಿ ಸಾವಿತ್ರಮ್ಮ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 16.08.08 ಬೆಂಗಳೂರು | ಕಮಲಾ ಪರಶುರಾಮ ರಾವ್ | ತಂದೆ ಕೋಳೂರು ರಾಮಸ್ವಾಮಿ |
| 16.08.08 ಬೆಂಗಳೂರು | ವೆಂಕಟರಾಮಯ್ಯ ಬಿ. ಎಸ್. | ತಾಯಿ ಭಾಗೀರಥಿ |
| 17.08.08 ಬಾಂಬೆ | ವಿಮಲಾ ದೀಕ್ಷಿತ್ | ಪತಿಯ ಹುಟ್ಟುಹಬ್ಬ |
| 17.08.08 ಮೈಸೂರು | ಲಕ್ಷ್ಮಿ ದೊರೆಸ್ವಾಮಿ | ಪತಿ ಆರ್. ಎನ್. ದೊರೆಸ್ವಾಮಿ |
| 17.08.08 ಬೆಂಗಳೂರು | ಗೋದಾವರಿ ಬಾಯಿ ಛಾರಿಟಬಲ್ ಟ್ರಸ್ಟ್ | ತಾಯಿ ಗೋದಾವರಿ ಬಾಯಿ |
| 20.08.08 ಬಾಂಬೆ | ಕೃಷ್ಣಮೂರ್ತಿ ಆರ್.ವಿ. | ಅತ್ತೆ ಸಾಲಿಗ್ರಾಮ ಸಾವಿತ್ರಮ್ಮ ಸುಬ್ಬಯ್ಯ |
| 21.08.08 ಬೆಂಗಳೂರು | ಎಸ್.ವಿ.ಶ್ರೀನಿವಾಸಯ್ಯ, ಎಸ್.ವಿ.ಕೃಷ್ಣಮೂರ್ತಿ, ಎಸ್.ವಿ.ರಾಮಸ್ವಾಮಿ | ತಾಯಿ ಪಾರ್ವತಮ್ಮ |
| 21.08.08 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಸಣ್ಣಮ್ಮ (ಪಿತಾಮಹಿ) |
| 22.08.08 ಬೆಂಗಳೂರು | ನಾಗರಾಜ್ ಹೆಚ್.ಎನ್. | ಪತ್ನಿ ಬಿ.ಎನ್.ರಮಾಮಣಿ |
| 23.08.08 ಬೆಂಗಳೂರು | ಉಮಾ ಶ್ರೀನಿವಾಸನ್ | ತಾಯಿ ಲಕ್ಷ್ಮೀರಾವ್ |
| 24.08.08 ಬೆಂಗಳೂರು | ಡಾ|| ಮೋಹನ್ ರಾಮ್ ಎಸ್. | ಹಿರಿಯ ಪುತ್ರ ಆನಂದ್ ಕುಮಾರ್ |
| 24.08.08 ಬೆಂಗಳೂರು | ರವಿಕುಮಾರ್ ಆರ್ ಮತ್ತು ಸಹೋದರರು ಹಾಗೂ ಸಹೋದರಿಯರು | ತಂದೆ ರಾಮರಾವ್ ಆರ್. ಕೆ. |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 26.08.08<br>ಬೆಂಗಳೂರು | ಮಾಯಾ ಹೆಚ್.ವಿ. | |
| 28.08.08<br>ಬೆಂಗಳೂರು | ರಾಮಸ್ವಾಮಿ ಬಿ.ಟಿ. | ಕಿರಿಯ ಸಹೋದರಿ<br>ಶಾಂತಮ್ಮ |
| 29.08.08<br>ಬೆಂಗಳೂರು | ರುಕ್ಮಿಣಿ ನಾಗರಾಜರಾವ್ | ಪತಿ ನಾಗರಾಜರಾವ್ |
| 29.08.08<br>ಬೆಂಗಳೂರು | ಪ್ರಭಾಕರ್ ಹೆಚ್.ಎಸ್. | ತಾಯಿ ಹೆಚ್. ವಿ. ಸೀತಮ್ಮ |
| 31.08.08<br>ಬೆಂಗಳೂರು | ನರಸಿಂಹದತ್ತ ಎನ್. | ಬಿ.ಎಸ್.ಗೋವಿಂದರಾಜು<br>(ಮಾತಾಮಹ) |
| 31.08.08<br>ಸಿಂಗಪೂರ್ | ಪ್ರಭಾ ಶೇಖರ್ | ಪತಿ ಹೆಚ್. ಕೆ.<br>ಚಂದ್ರಶೇಖರ್ |

## ರಮೇಶ್‌ಗೆ ಪ್ರಶಸ್ತಿ

ಕೊಪ್ಪಳ ಜಿಲ್ಲಾ ನಾಗರಿಕರ ವೇದಿಕೆ ಕೊಪ್ಪಳ ಸಾಹಿತ್ಯ ಭವನದಲ್ಲಿ ದಿನಾಂಕ 24, 25 ಮತ್ತು 26 ಆಗಸ್ಟ್ 2008ರಂದು ಆಚರಿಸಿದ ಕೊಪ್ಪಳ ಜಿಲ್ಲಾ ಉತ್ಸವದಲ್ಲಿ ಸಂಕೇತಿ ಬಂಧುಗಳಾದ ಶ್ರೀ ಬೆ. ಗೋ. ರಮೇಶ್‌ರವರಿಗೆ ಅವರು ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ ರಾಜ್ಯಮಟ್ಟದ ಸಿದ್ಧಯ್ಯ ಪುರಾಣಿಕ ಸ್ಮಾರಕ ಪ್ರಶಸ್ತಿ ನೀಡಿ ಗೌರವಿಸಿದೆ.

ಇವರಿಗೆ ಸಂಘದ ಅಭಿನಂದನೆಗಳು





## ಉಪಾಕರ್ಮ ವರದಿ - 2008

### ಬೆಂಗಳೂರು ಶಾಖೆ

ಬೆಂಗಳೂರು ಶಾಖೆಯ ಆಶ್ರಯದಲ್ಲಿ ಶ್ರಾವಣ ಶುಕ್ಲ ಪೂರ್ಣಿಮೆ ದಿನಾಂಕ 16.08.2008 ಶನಿವಾರ ಬೆಳಿಗ್ಗೆ 10 ಘಂಟೆಗೆ ವಿದ್ಯಾ ವಿಹಾರ, ಶಂಕರಪುರಂ, ಬೆಂಗಳೂರು-04ರಲ್ಲಿ ಉಪಾಕರ್ಮವನ್ನು ಆಚರಿಸಲಾಯಿತು. ಇದರ ನೇತೃತ್ವವನ್ನು ಕೇಂದ್ರ ಸಮಿತಿ ಅಧ್ಯಕ್ಷರಾದ ಶ್ರೀ ಎಂ. ನರಸಿಂಹನ್ ರವರು ವಹಿಸಿದ್ದರು. ಸುಮಾರು 200 ಆಸ್ತೀಕ ಮಹಾಶಯರು ಸೇರಿದ್ದರು.

ಉಪಾಕರ್ಮ ಮುಗಿದನಂತರ ಎಲ್ಲಾ ಆಸ್ತೀಕ ಮಹಾಜನರೆಲ್ಲರಿಗೂ ಮತ್ತು ಅವರುಗಳ ಕುಟುಂಬ ವರ್ಗದವರಿಗೂ ಭೋಜನ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

ಅಂದಿನ ಭೋಜನ ವ್ಯವಸ್ಥೆಯನ್ನು ಹೋದ ವರ್ಷದಂತೆ ಈ ವರ್ಷವೂ ಕೂಡ ನಮ್ಮ ಬಂಧುಗಳಾದ ಶ್ರೀ ತೇಜ್‌ನಾಗ್‌ರವರು ವಹಿಸಿಕೊಂಡಿದ್ದರು. ಅವರಿಗೆ ಸಂಘದ ಹೃತ್ಪೂರ್ವಕ ವಂದನೆಗಳು.

ಈ ಕಾರ್ಯಕ್ರಮಕ್ಕಾಗಿ ಶ್ರಮಿಸಿದ, ಸಹಕರಿಸಿದ ನಮ್ಮ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೂ, ಸದಸ್ಯರುಗಳಿಗೂ ಮತ್ತು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಹನೀಯರಿಗೂ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳು.

ಆರ್.ಎಸ್.ಶ್ರೀನಿವಾಸಯ್ಯ
ಗೌ॥ ಅಧ್ಯಕ್ಷರು

ಬಿ. ಆರ್. ನರಸಿಂಹಮೂರ್ತಿ
ಗೌ॥ ಕಾರ್ಯದರ್ಶಿ
ದೂ : 26711031

## ಬದಲಾದ ವಿಳಾಸಗಳ ಪಟ್ಟಿ ಲಭ್ಯ

15.01.2008 ರವರೆಗೆ ಪರಿಷ್ಕರಿಸಿದ ಬದಲಾದ ವಿಳಾಸ ಪಟ್ಟಿ ಮುದ್ರಿಕೆಯಾಗಿ ಲಭ್ಯವಾಗಿರುತ್ತದೆ. ಇದನ್ನು ಮೈಸೂರು ಕಛೇರಿ ಮತ್ತು ಬೆಂಗಳೂರು ಕಛೇರಿಗಳಲ್ಲಿ ಪಡೆಯಬಹುದು. ಇದರ ಬೆಲೆ ರೂ. 15/- ಮಾತ್ರ. ಇಡೀ ಪುಸ್ತಕದ ಬೆಲೆ ರೂ. 50/- ಮಾತ್ರ.

# ಶ್ರದ್ಧಾಂಜಲಿ

11.07.08 **ಆರ್. ವೆಂಕಟರಾಮನ್, 77 ವರ್ಷ, ವಾಧೂಲಸ ಗೋತ್ರ**
ಬೆಂಗಳೂರು (ದಿ|| ಹೆಚ್. ರಾಮಸ್ವಾಮಯ್ಯನವರ ಪುತ್ರ)

06.09.08 **ರಾಧಾ ಕೃಷ್ಣಮೂರ್ತಿ, 76 ವರ್ಷ, ಭಾರದ್ವಾಜ ಗೋತ್ರ**
ಬೆಂಗಳೂರು (ಕಾಫೀಬೋರ್ಡ್‌ನಲ್ಲಿದ್ದ ದಿ|| ಬಿ. ಎಸ್. ಕೃಷ್ಣಮೂರ್ತಿ ಅವರ ಧರ್ಮಪತ್ನಿ)

09.09.08 **ಸುಬ್ಬಲಕ್ಷಮ್ಮ, 98 ವರ್ಷ, ಭಾರದ್ವಾಜ ಗೋತ್ರ**
ಬೆಂಗಳೂರು (ರುದ್ರಪಟ್ಟಣದ ದಿ|| ಲಕ್ಷ್ಮೀಕಾಂತಯ್ಯ ಅವರ ಧರ್ಮ ಪತ್ನಿ)

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

# ಬೆಂಗಳೂರು ಸಂಕೇತಿ ಮಹಿಳಾ ಸಮಾಜ

**ದಿನಾಂಕ 09.08.08ರಂದು ಬೆಳಿಗ್ಗೆ 11 ಗಂಟೆಗೆ ಆದರ್ಶ ವನಿತಾ ಸಮಾಜದಲ್ಲಿ ಶ್ರೀಮತಿ ಆರತಿ ಬಾಲಸುಬ್ರಹ್ಮಣ್ಯ ಅವರಿಂದ ''ಶ್ರಾವಣ ಮಾಸದ ಮಹತ್ವ'' ಕುರಿತು ಒಂದು ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅಂದಿನ ಆತಿಥೇಯರುಗಳು ಶ್ರೀಮತಿಯರಾದ ಆರ್.ಎಸ್.ಶಾಂತಾ, ಆರ್.ಎಸ್.ಮಂಜುಳಾ, ಆರ್.ಎಸ್.ವತ್ಸಲಾ, ವಸಂತಮಾಲಾ ಮತ್ತು ಆಶಾ.**

**ನಮ್ಮ ಸದಸ್ಯೆ ಶ್ರೀಮತಿ ಕೌಸಲ್ಯಾಬಾಯಿಯವರು ಅಶಕ್ತ ಮಾಸಾಶನಕ್ಕಾಗಿ ತಿಂಗಳಿಗೆ ರೂ. 200/- ನೀಡುವುದಾಗಿ ತಿಳಿಸಿದ್ದಾರೆ. ಇವರಿಗೆ ಸಂಘದ ಪರವಾಗಿ ವಂದನೆಗಳು. ಇದನ್ನು ಇನ್ನೊಬ್ಬ ಮಹಿಳೆಗೆ ನೀಡುವ ಮಾಸಾಶನಕ್ಕೆ ಉಪಯೋಗಿಸುತ್ತೇವೆಂದು ತಿಳಿಸಲು ಹರ್ಷಿಸುತ್ತೇವೆ.**

**ರು.ಕೃ.ಗೀತಾಮಣಿ**
**ದೂ : 26695657** **ಗೌ|| ಕಾರ್ಯದರ್ಶಿ**





# 61ನೇ ವರ್ಷದ ಸ್ವಾತಂತ್ರ್ಯೋತ್ಸವ

## ಬೆಟ್ಟದಪುರ ಸಂಕೇತಿ ಸಮುದಾಯ ಭವನ, ಮೈಸೂರು

ದಿನಾಂಕ 15.08.2008 ನೇ ಶುಕ್ರವಾರ ಬೆಳಿಗ್ಗೆ 9.30ಕ್ಕೆ ಸರಿಯಾಗಿ ಬೆಟ್ಟದಪುರ ಸಂಕೇತಿ ಸಂಘದ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಸಂಭ್ರಮದಿಂದ 60ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.

ಪ್ರಾರಂಭದಲ್ಲಿ ನಿಲಯಪಾಲಕರಾದ ಶ್ರೀ ಶಿವಕುಮಾರ್‌ರವರ ಸ್ವಾಗತದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ನಿಲಯಪಾಲಕರ ಕೋರಿಕೆಯಂತೆ ಅಂದು ಅಲ್ಲಿ ಹಾಜರಿದ್ದ ಕೇಂದ್ರ ಸಮಿತಿ ಜಂಟೀ ಕಾರ್ಯದರ್ಶಿಗಳಾದ ಶ್ರೀಯುತ ಎಂ. ಆರ್. ಶ್ರೀಕಂಠನ್ ಅಧ್ಯಕ್ಷತೆ ವಹಿಸಲು ಕೋರಲಾಗಿ ಅವರು ಬಹಳ ಸಂತೋಷದಿಂದ ಒಪ್ಪಿ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟಿರುತ್ತಾರೆ.

ಈ ಸಂದರ್ಭದಲ್ಲಿ ನಿಲಯದ ಎಲ್ಲಾ ವಿದ್ಯಾರ್ಥಿಗಳು ಹಾಗೂ ಶ್ರೀನಿವಾಸ ಭಟ್ಟರು ಎಲ್ಲರೂ ಸೇರಿ ಕಾರ್ಯಕ್ರಮವನ್ನು ಮತ್ತಷ್ಟು ಸುಗಮವಾಗಿ ನಡೆಯಲು ಸಹಕರಿಸಿದರು.

ಕಡೆಯಲ್ಲಿ ವಿದ್ಯಾರ್ಥಿಗಳಿಗೆ ಅತಿಥಿ ಅಭ್ಯಾಗತರಿಗೆ ಸಿಹಿ ಹಂಚಲಾಯಿತು.

ವಿದ್ಯಾರ್ಥಿ ನಿಲಯ ಕ್ಷೇಮಪಾಲಕ
**ಕೆ. ಎಸ್. ರವೀಂದ್ರನಾಥ್ ಕಣಗಾಲ್**

# *Change of Address*

**B. S. Venkatesh**
**Shobha**
'Ganapa', No. 51/107, Doddabettahalli Layout,
Vidyaranyapura Post, Near Mahendra Bale Thota,
Bangalore - 560 097
**ಕೊಬ್ಬರಿ ಕೆತ್ತನೆ ಮತ್ತು ಮದುವೆ ಮನೆಯ ಅಲಂಕಾರ ಸಾಮಗ್ರಿಗಳನ್ನು ಮಾಡಿಕೊಡಲಾಗುತ್ತದೆ.**
Ph : 9343729964, 9242867727

## ಪ್ರತಿಭೆ



**ಕು॥ ಧಾತ್ರೀ**

**6ನೇ ತರಗತಿ ಐಸಿಎಸ್‌ಇ**

**ರಾಜ್ಯಮಟ್ಟದ ಭರತನಾಟ್ಯ ಜೂನಿಯರ್ ಪರೀಕ್ಷೆಯಲ್ಲಿ ಶೇ 81 ಅಂಕ ಪಡೆದು ಮಂಡ್ಯ ಜಿಲ್ಲೆಗೇ ಪ್ರಥಮ ಸ್ಥಾನ ತಂದುಕೊಟ್ಟಿರುತ್ತಾಳೆ. ಸಂಗೀತ ಮತ್ತು UCMASನಲ್ಲಿ 9ನೇ ಲೆವೆಲ್‌ವರೆಗೆ ಪೂರೈಸಿರುತ್ತಾಳೆ.**

ತಂದೆ : ಡಾ॥ ಬಿ. ಕೆ. ಸುರೇಶ್

ತಾಯಿ : ಅನುಪಮಾ

ಅಜ್ಜಂದಿರು : ಮಂಡ್ಯದ ಶ್ರೀ ಲಕ್ಷ್ಮೀಜನಾರ್ದನ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾಗಿದ್ದ ದಿ॥ ಬಿ. ಎಸ್. ಕೃಷ್ಣಮೂರ್ತಿ ಮತ್ತು ಎಳ್ಳೇಶಪುರದ ವೈ.ಎನ್. ವೆಂಕಟೇಶಮೂರ್ತಿ

ಅಜ್ಜಿಯರು : ಶ್ರೀಮತಿ ದಾಕ್ಷಾಯಿಣಿ ಮತ್ತು ಶ್ರೀಮತಿ ಲೀಲಾ

ಶ್ರೀಮತಿ ರಾಧಿಕಾ

**Radhika as successfully completed the Certified General Accounting Course in Canada and has now become a member of Elite Professionals there.**

ಪತಿ : ದಿವಾಕರ್ ರುದ್ರಪಟ್ಟಣ

ತಂದೆ : ದಿ॥ ಹರವೆ ಕೇಶವಮೂರ್ತಿ

ತಾಯಿ : ಸತ್ಯವತಿ







## Chi. Hanasoge Nitin Krishnamurthy

On the occasion of the Independence Day, at a function organised by District Collectors Office at Bandra in Mumbai, Nitin was awarded a Certificate for having passed the National Talent Search Examination by the Hon'ble Minister of Social Justice, Govt. of Maharashtra Mr. Chandrakanth Handore.

Nitin has completed 10th standard.

**Father : H. S. Krishnamurthy, Mumbai**

**Mother : Geetha**

## ಸನ್ಮಾನ



**ತಾ॥ 14.09.2008ರಂದು ನಯನ ಸಭಾಂಗಣ, ಕನ್ನಡ ಭವನದಲ್ಲಿ ನಡೆದ ಸರಳ ಸುಂದರ ಸಮಾರಂಭದಲ್ಲಿ ನಮ್ಮ ಬಂಧುಗಳಾದ ವೇಣುಗಾನ ವಿದ್ವಾನ್ ಬಿ. ಜಿ. ಶ್ರೀನಿವಾಸ್ (ಪಾಪು) ಅವರಿಗೆ ''ಜಗಜ್ಯೋತಿ ಶ್ರೀ ಬಸವೇಶ್ವರ ಕಾಯಕ ಶ್ರೀ'' ಎಂಬ ಪ್ರಶಸ್ತಿಯನ್ನು, ವಿಶ್ವವೀರಶೈವ ಸಂಸ್ಕೃತಿ ಪ್ರತಿಷ್ಠಾನ (ರಿ.) ವು ನೀಡಿರುತ್ತದೆ.**

ಎಲ್ಲರಿಗೂ ಸಂಘದ ಅಭಿನಂದನೆಗಳು

# ಬೆಟ್ಟದಪುರ ಸಂಕೇತಿ ಸಂಘ (ರಿ.)

ನಂ. 81, 12ನೇ ಮುಖ್ಯರಸ್ತೆ, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು – 560 070

## ಸಾಲರೂಪದ ವಿದ್ಯಾರ್ಥಿವೇತನದ ಅರ್ಜಿ ಪತ್ರ
(B.E., M.B.B.S., C.A., Ph.D. M.B.A.)

2008 - 2009

Photo

ಕ್ರಮ ಸಂಖ್ಯೆ :

ಸೂಚನೆ : ವಿದ್ಯಾರ್ಥಿ/ನಿಯ ತಂದೆ / ತಾಯಿ ಅಥವಾ ಪೋಷಕರು ಸಂಘದ ಆಜೀವ ಸದಸ್ಯರಾಗಿರಬೇಕು.

1. ಅಭ್ಯರ್ಥಿಯ
   ಅ. ಹೆಸರು
   ಆ. ವಯಸ್ಸು
   ಇ. ವಿಳಾಸ

2. ತಂದೆ / ತಾಯಿ / ಪೋಷಕರ
   ಅ. ಹೆಸರು
   ಆ. ವಿಳಾಸ
   ಇ. ಉದ್ಯೋಗ
   ಈ. ವಾರ್ಷಿಕ ವರಮಾನ
   ಉ. ಸರ್ಟಿಫಿಕೇಟ್ ಲಗತ್ತಿಸಿದೆಯೇ ?
   ಊ. ಸಂಘದ ಆಜೀವ ಸದಸ್ಯರಾಗಿದ್ದಾರೆಯೇ ?

3. ವಿದ್ಯಾರ್ಥಿ/ನಿ ವ್ಯಾಸಂಗ ಮಾಡುತ್ತಿರುವ
   ಅ. ತರಗತಿ
   ಆ. ಶಾಲೆ/ಕಾಲೇಜು

4. ಅಭ್ಯರ್ಥಿಗೆ ಕಳೆದ ಸಾಲಿನಲ್ಲಿ ಸಂಘದಿಂದ ವಿದ್ಯಾರ್ಥಿ ವೇತನ ಕೊಟ್ಟಿದೆಯೇ ?

5. ಅಭ್ಯರ್ಥಿಯು ಎಷ್ಟು ವರ್ಷಗಳಿಂದ ವಿದ್ಯಾರ್ಥಿ ವೇತನವನ್ನು ಪಡೆದಿರುತ್ತಾನೆ/ಳೆ ?





6. ಸಂಘದ ಸ್ಥಳೀಯ ಪ್ರತಿನಿಧಿಯ ಶಿಫಾರಸ್ಸು ಮತ್ತು ಸಹಿ

7. ಶಾಲೆ/ಕಾಲೇಜುಗಳ ಮುಖ್ಯೋಪಾಧ್ಯಾಯರ/ ಪ್ರಿನ್ಸಿಪಾಲರ ಸರ್ಟಿಫಿಕೇಟ್ ಲಗತ್ತಿಸಿದೆಯೇ ?

8. ಅಭ್ಯರ್ಥಿಯು ತೇರ್ಗಡೆ ಹೊಂದಿದ ಹಿಂದಿನ ಪರೀಕ್ಷೆಯ ಅಂಕಪತ್ರ ಲಗತ್ತಿಸಿದೆಯೇ ?

9. ಇತರ ವಿವರಗಳು : ಉದ್ಯೋಗದಲ್ಲಿರುವ ಸಹೋದರರು.

10. ವಿದ್ಯಾಭ್ಯಾಸ ಮಾಡುತ್ತಿರುವ ಸಹೋದರರು

ಮೇಲ್ಕಂಡ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆಯೆಂದು ಹೇಳುತ್ತೇನೆ.

**ತಂದೆ/ತಾಯಿ/ಪೋಷಕರ ಸಹಿ** **ಅಭ್ಯರ್ಥಿಯ ಸಹಿ**

**ಸ್ಥಳ :** **ತಾ॥**

ಸಂಘದ ವಿದ್ಯಾರ್ಥಿ ವೇತನ ಯೋಜನೆಯ ನಿಯಮ ನಿಬಂಧನೆಗಳಿಗೆ ನಾನು ಒಪ್ಪಿರುತ್ತೇನೆ ಮತ್ತು ನನ್ನ ವಿದ್ಯಾಭ್ಯಾಸ ಪೂರ್ಣಗೊಂಡು ನಾನು ಉದ್ಯೋಗವನ್ನು ಕೈಗೊಂಡ ನಂತರ ಸಂಘದ ವಿದ್ಯಾರ್ಥಿವೇತನ ನಿಧಿಗೆ ನನ್ನ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಸಹಾಯವನ್ನು ಮಾಡುತ್ತೇನೆ.

ಸ್ಥಳ : ಅಭ್ಯರ್ಥಿಯ ಸಹಿ

### ಕಾರ್ಯಾಲಯದ ದಾಖಲೆಗೆ

1. ಅರ್ಜಿಪತ್ರ ಸಂಘಕ್ಕೆ ತಲುಪಿದ ತಾರೀಖು....................................
2. ಕಾರ್ಯಕಾರಿ ಸಮಿತಿಯ ತಾ॥...................ನ ಸಭೆಯಲ್ಲಿ ಅರ್ಜಿಯನ್ನು ಮಂಜೂರು ಮಾಡಲಾಗಿದೆ.
3. ವಿದ್ಯಾರ್ಥಿವೇತನವನ್ನು ಅಭ್ಯರ್ಥಿಗೆ ತಾ॥............................ ರಂದು ...................................................... ಮೂಲಕ ಕಳುಹಿಸಿದೆ.

**ಅರ್ಜಿ ಕಳುಹಿಸಲು ಕೊನೆಯ ದಿನಾಂಕ 25-10-2008** **ಗೌ॥ ಕಾರ್ಯದರ್ಶಿ**

# ಬೇಕಾಗಿದ್ದಾರೆ

ಸದ್ಯದಲ್ಲಿಯೇ ನಿರ್ಮಾಣಗೊಳ್ಳಲಿರುವ ಸಂಘದ ವೃದ್ಧಾಶ್ರಮಕ್ಕೆ ಸೂಕ್ತ ಮೇಲ್ವಿಚಾರಕರು ಹಾಗೂ ಅಡಿಗೆಯವರು ಬೇಕಾಗಿದ್ದಾರೆ. ವೃದ್ಧಾಶ್ರಮದ ಆಶಯದಂತೆ ಸಹನೆ, ಆಸಕ್ತಿ ಅಭಿಮಾನವುಳ್ಳ ವ್ಯಕ್ತಿಗಳಿಗೆ ಸ್ವಾಗತ. ಆಸಕ್ತರು ಸಂಘದ ಪದಾಧಿಕಾರಿಗಳನ್ನು ಲಿಖಿತಮೂಲಕ ಸಂಪರ್ಕಿಸಬೇಕಾಗಿ ಕೋರಲಾಗಿದೆ.

**ಸ್ಥಳ :**
**ನಂ. 172, 'ಬಾಲಾಜಿ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿ, ವಾಜರಹಳ್ಳಿ, ಕನಕಪುರ ರಸ್ತೆ, ಬೆಂಗಳೂರು ದಕ್ಷಿಣ**

---

## ಮತ್ತೊಬ್ಬ ಸಂಕೇತಿ ಪುರೋಹಿತರು ಬೆಂಗಳೂರಿನಲ್ಲಿ ಲಭ್ಯ

**ಶುಭ ಸಮಾರಂಭಗಳಿಗೆ ಸಂಪರ್ಕಿಸಿ :**

**ಆರ್. ಕೃಷ್ಣಪ್ರಕಾಶ್**
ಇ/ಮ: ಲೇ॥ ಬಿ. ಕೆ. ರಾಮಸ್ವಾಮಿ
ನಂ. 88, ''ಅಕ್ಷಯ ನಿಲಯ'', 5ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ,
ಕಲ್ಯಾಣನಗರ, ಮೂಡಲಪಾಳ್ಯ
ಬೆಂಗಳೂರು – 560 072
ದೂರವಾಣಿ : 9343202502, 9448855209





## -: ರಸಪ್ರಶ್ನೆಗಳು :-

1. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಏಕೈಕ ಲೇಖಕಿ ಯಾರು ?
2. ಕರ್ನಾಟಕದ ರಾಜ್ಯಪಾಲರಾಗಿದ್ದ ಏಕೈಕ ಮಹಿಳೆ ಯಾರು ?
3. ಕರ್ನಾಟಕ ವಿಧಾನಸಭೆಯ ಅಧ್ಯಕ್ಷರಾಗಿದ್ದ ಏಕೈಕ ಮಹಿಳೆ ಯಾರು ?
4. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾದ ಏಕೈಕ ಮಹಿಳೆ ಯಾರು?
5. ಕರ್ನಾಟಕ ಚಲಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಮಹಿಳೆ ಯಾರು ?
6. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಮೊದಲ ಮಹಿಳೆ ಯಾರು?
7. ಕೇಂದ್ರ ಸರ್ಕಾರದಲ್ಲಿ ಕಾನೂನು ಸಚಿವರಾದ ಕನ್ನಡತಿ ಯಾರು ?
8. ಭಾರತದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಮೊದಲ ಮಹಿಳೆ ಯಾರು ?
9. ಪಾನನಿರೋಧ ನೀತಿಯ ರದ್ದತಿಯನ್ನು ಪ್ರತಿಭಟಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಮಹಿಳೆ ಯಾರು ?
10. ಇಂಗ್ಲೀಷ್ ಕಡಲ್ಗಾಲುವೆಯನ್ನು ಈಜಿದ ವಿಶ್ವದ ಮೊದಲ ಅಂಗವಿಕಲ ಮಹಿಳೆ ಯಾರು ?

---

**ಉತ್ತರಗಳು :**

1. ಗೀತಾ ನಾಗಭೂಷಣ 2. ವಿ. ಎಸ್. ರಮಾದೇವಿ 3. ಕೆ. ಎಸ್. ನಾಗರತ್ನಮ್ಮ
4. ನ್ಯಾ॥ಮಂಜುಳಾ ಚೆಲ್ಲೂರ್ 5. ಡಾ॥ ಜಯಮಾಲಾ 6. ಜಯದೇವಿತಾಯಿ ಲಿಗಾಡೆ
7. ಡಾ॥ ಸರೋಜಿನಿ ಮಹಿಷಿ 8. ಕಿತ್ತೂರು ರಾಣಿ ಚೆನ್ನಮ್ಮ 9. ಯಶೋಧರಾ ದಾಸಪ್ಪ
10. ಕನ್ನಡತಿ ಸಿ. ಎನ್. ಜಾನಕಿ

## ಸಮಾಚಾರ ಸಂಗ್ರಹ

**ಬ್ರಿಟೀಷ್ ಪದವಿಗೆ ಬೆಲೆ ಇಲ್ಲ! (26 ಜೂನ್ 08 : ಬಿಬಿಸಿ) ಲಂಡನ್ :** ನಮ್ಮ ದೇಶದ ವಿಶ್ವವಿದ್ಯಾನಿಲಯಗಳ ಪದವಿಗಳಿಗೆ ಬೆಲೆ ಇಲ್ಲದಿರುವಂತೆಯೇ ಇಂಗ್ಲೀಷರು ಕೊಡುವ ಬ್ರಿಟೀಷ್ ವಿಶ್ವವಿದ್ಯಾನಿಲಯಗಳ ಪದವಿಗಳಿಗೂ ಬೆಲೆ ಇಲ್ಲವೆಂದು ಗುಣಮಟ್ಟ ಖಾತರಿ ಸಂಸ್ಥೆ ಹೇಳಿದೆ. ಪಾಪ! ಭಾರತೀಯರು ಯಾವುದೋ ಮೋಹವಿಟ್ಟುಕೊಂಡು ಬರುತ್ತಿದ್ದಾರೆ. ಆದರೆ ಇಲ್ಲಿ ಕೊಡುವ ಸರ್ಟಿಫಿಕೇಟ್‌ಗಳ ಗುಣಮಟ್ಟ 200 ವರ್ಷಗಳಷ್ಟು ಹಿಂದಿನ ಅರ್ಥಹೀನ ವ್ಯವಸ್ಥೆ ಎಂದು ಶಿಕ್ಷಣ ತಜ್ಞರು ಹೇಳುತ್ತಾರೆ. ದುಡ್ಡು ಮಾಡುವ ಸಲುವಾಗಿ ವಿಶ್ವವಿದ್ಯಾನಿಲಯಗಳು ವಿದೇಶಗಳಲ್ಲಿ ಏಜೆಂಟರನ್ನು ಬಿಟ್ಟಿವೆ. ಹಾಗಾಗಿ ದುಡ್ಡು ಕೊಟ್ಟರೆ ಪದವಿ ಪಡೆಯಬಹುದೆಂಬ ಅಗ್ಗದ ಭಾವನೆ ಜನರಿಗೆ ಬಂದಿದೆ. ವಿದೇಶೀ ವ್ಯಾಮೋಹವನ್ನು ಹಣದ ರೂಪದಲ್ಲಿ ವಿಶ್ವವಿದ್ಯಾನಿಲಯಗಳು ಪಡೆಯುತ್ತಿವೆ ಎಂದು ಹೇಳಿದೆ. ಶಿಕ್ಷಣವೇ ವ್ಯಾಪಾರವಾಗಿದೆ ಎಂದು ಹೇಳಿದೆ.

**ಅಮೇರಿಕಾದ ಹಣಕ್ಕೂ ಬೆಲೆ ಇಲ್ಲ! (26 ಜೂನ್ 08 : ಎಪಿ) ನ್ಯೂಯಾರ್ಕ್ :** 2001ರ ಸೆಪ್ಟೆಂಬರ್ 11ರಂದು ನಡೆದ ದುರಂತರ ನಂತರ ಅಮೇರಿಕಾಗೆ ಭಯೋತ್ಪಾದಕರ ಮೇಲೆ ಎಲ್ಲಿಲ್ಲದ ಭಯ ಬಂದುಬಿಟ್ಟಿತು. ಅವರನ್ನು ಹೇಗಾದರೂ ಮಾಡಿ ಮಟ್ಟ ಹಾಕಬೇಕೆಂದು ಕಂಡಕಂಡವರ ಮುಂದೆ ಬೇಡಿಕೊಳ್ಳುತ್ತಿತ್ತು. ಕೇಳಿದವರಿಗೆ ಕೇಳಿದಷ್ಟು ಹಣ ಕೊಡಲೂ ತಯಾರಾಯಿತು. ಆದರೆ ಪ್ರತಿಫಲ ಮಾತ್ರ ಶೂನ್ಯ. ಅಮೇರಿಕಾದ ಈ ಭಯವನ್ನು ಲಾಭ ಮಾಡಿಕೊಂಡಿದ್ದು ಪಾಕೀಸ್ತಾನ ! ಅಮೇರಿಕಾವನ್ನು ಎದುರುಹಾಕಿಕೊಂಡರೆ ಎಲ್ಲೂ ಸಾಲ ಸಿಗುವುದಿಲ್ಲ. ಭಯೋತ್ಪಾದಕರನ್ನು ಎದುರುಹಾಕಿಕೊಂಡರೆ ಮುಷರಫ್ ಪ್ರಾಣ ಉಳಿಯುವುದಿಲ್ಲ ! ಹಾಗಾಗಿ ಪಾಕ್ ಅಧ್ಯಕ್ಷ ಮುಷರಫ್ ಮಾಡಿದ್ದೇನೆಂದರೆ ಭಯೋತ್ಪಾದಕರನ್ನು ಮಟ್ಟಹಾಕುವುದಾಗಿ ನಂಬಿಸಿ ಅಮೇರಿಕಾದಿಂದ ಹಣ ಪಡೆದು ಅದನ್ನು ಭಯೋತ್ಪಾದಕರಿಗೆ ಕೊಟ್ಟಿದ್ದು! ಅಮೇರಿಕಾ ನೀಡಿದ ಹಣಕ್ಕೆ ಪಾಕಿಸ್ತಾನ ಲೆಕ್ಕ ಇಟ್ಟಿಲ್ಲವೆಂದು ಲೆಕ್ಕಪರಿಶೋಧಕ ಸಂಸ್ಥೆ ಹೇಳಿದೆ. (ಭಯೋತ್ಪಾದಕರ ವಿರುದ್ಧದ ಹೋರಾಟಕ್ಕೆ ಅಮೇರಿಕಾ ಮೊನ್ನೆ 5230 ಲಕ್ಷ ಡಾಲರ್ ಅನ್ನು ಪಾಕೀಸ್ತಾನಕ್ಕೆ ನೀಡಿತ್ತು !) 200 ಕೋಟಿ ಡಾಲರ್ಸ್‌ಗೆ ಲೆಕ್ಕವೇ ಇಲ್ಲ! ಹೀಗೆ ಬೇಕಾಬಿಟ್ಟಿಯಾಗಿ ಹಣ ನೀಡಿದ್ದಕ್ಕೆ ಡೆಮೋಕ್ರಾಟ್ ಪಕ್ಷ ಟೀಕಿಸಿದೆ. ಇದುವರೆಗೆ 560 ಕೋಟಿ ಡಾಲರ್ಸ್ ಕೊಟ್ಟಾಗಿದೆ ; ಮೋಸವಾಗಿದೆ.

**ದೇವರ ಆನೆಗೆ ತುಂತುರು ಸ್ನಾನ ! (26 ಜೂನ್ 08 : ಪಿಟಿಐ) ಅಲಪ್ಪುಳ :** ಶ್ರೀಕೃಷ್ಣ ದೇವಾಲಯದ ನಾಯಕ ಆನೆಗೆ ಪ್ರತಿದಿನ ಶವರ್‌ಬಾತ್ ಮಾಡಿಸಬೇಕೆಂದು ತೀರ್ಮಾನವಾಗಿದೆ. ಇದಕ್ಕಾಗಿ ತಿರುವಂಕೂರು ದೇವಸ್ವಂ ಬೋರ್ಡ್ 8.79 ಲಕ್ಷ





ರೂಪಾಯಿ ಖರ್ಚು ಮಾಡಿದೆ. ಅದಕ್ಕಾಗಿ ಜಂಬೋ ಬಾತ್ ರೂಮನ್ನು ಕಟ್ಟಿಸಿದೆ. ಅದರಲ್ಲಿ 70 ನಲ್ಲಿಗಳಿವೆ. ಇವುಗಳನ್ನು ತಿರುಗಿಸಿದರೆ ಆನೆಗೆ ಮಳೆಯಲ್ಲಿ ನಿಂತ ಅನುಭವವಾಗುತ್ತದೆ. (ಉಳಿದ ಆನೆಗಳಿಗೆ ಹೊಳೆ ಸ್ನಾನ). ಬೇಸಿಗೆಯಲ್ಲಿ ಸ್ನಾನಕ್ಕೆ ಅವಕಾಶವಿಲ್ಲದ್ದರಿಂದ ಆನೆ ದಾಂಧಲೆ ಮಾಡುತ್ತಿತ್ತು. ಅದನ್ನು ತಪ್ಪಿಸಲು ''ಇದೇ ಸರಿಯಾದ ಉಪಾಯ'' !

**ಮೊಬೈಲ್ : ಬ್ಯಾಟರಿ ಡೆಡ್ ಆದರೆ ಡಾನ್ಸ್ ಮಾಡಿ! (27 ಜೂನ್ 08:ಬಿಬಿಸಿ) ಲಂಡನ್ :** ಡಾನ್ಸ್ ಮಾಡಿದರೆ ಚಾರ್ಜ್ ಆಗುವ ಮೊಬೈಲ್ ಬ್ಯಾಟರಿಗಳನ್ನು ಆರೆಂಜ್-ಗಾಟ್ವೆಂಡ್ಸ್ ಮೊಬೈಲ್ ಕಂಪನಿ ತಯಾರಿಸಿದೆ. ಈ ಮೊಬೈಲ್‌ಗಳು ಇಸ್ಪೀಟ್ ಪ್ಯಾಕ್‌ನಷ್ಟೇ ದಪ್ಪವಿರುತ್ತದೆ. ತೋಳಿಗೆ ಮೊಬೈಲನ್ನು ಫಿಕ್ಸ್ ಮಾಡಿಕೊಂಡು ಡಾನ್ಸ್ ಮಾಡಿದರೆ ಮೊಬೈಲ್ ಚಾರ್ಜ್ ಆಗುತ್ತದೆ ಎಂದು ಆರೆಂಜ್ ಕಂಪನಿ ಹೇಳಿಕೊಂಡಿದೆ.

**ಬದಲಾದ ಇಂಟರ್ನೆಟ್ (27 ಜೂನ್ 08 : ಎಪಿ) ನ್ಯೂಯಾರ್ಕ್ :** ಜನ ಬದಲಾಗಿದ್ದಾರೆ. ಸೌಲಭ್ಯಗಳೂ ಬದಲಾಗುತ್ತಿವೆ. ಅವುಗಳಲ್ಲಿ ಇಂಟರ್ನೆಟ್ಟೂ ಸೇರಿದೆ. ಮೊದಲು **dot com** ಎಂದು ಕೊನೆಯಾಗುತ್ತಿತ್ತು. ನಂತರ **dot net - dot org - dot edu - dt tv** ಎಂದು ಹೆಸರು ಪಡೆದವು. ಇನ್ನೂ ಬದಲಾಗುತ್ತಿದೆ. ಈಗ ಸಂಸ್ಥೆಗಳ ಹೆಸರನ್ನೂ ಸೇರಿಸಿಕೊಳ್ಳಬಹುದು, ದೇಶಗಳ ಹೆಸರನ್ನೂ ಸೇರಿಸಬಹುದು. **dot in - dot us - dot uk** ಹಾಗೆಯೇ **dot ibm - dot ibe.** ಅಷ್ಟೇ ಅಲ್ಲ ನಗರಗಳ ಹೆಸರಿನ **short cut** ಪದಗಳನ್ನೂ ಸೇರಿಸಬಹುದು. **dot news - dot sports - dot politics - dot agni - dot science - dot medicine....** ಹೀಗೆ ತಮ್ಮನ್ನು ನಿರ್ದಿಷ್ಟವಾಗಿ ಗುರುತಿಸಿಕೊಳ್ಳಲು ಇದು ಸಹಕಾರಿಯಾಗಲಿದೆ. ಈ ರೀತಿಯ ಹೆಸರುಗಳನ್ನು ರಿಜಿಸ್ಟರ್ ಮಾಡಿಸುವುದು ದುಬಾರಿಯಾಗಲಿದೆ. ಸಧ್ಯಕ್ಕೆ **dot com - dot net**ಗೆ 10 ಡಾಲರ್ ಅಥವಾ ಇನ್ನೂ ಕಡಿಮೆ ಖರ್ಚಾಗುತ್ತದೆ. ಆದರೆ ಇಂತಹ ವಿಶೇಷ ವೆಬ್‌ಸೈಟ್ಸ್‌ಗೆ ರಿಜಿಸ್ಟ್ರೇಷನ್‌ಗಾಗಿ 1 ಲಕ್ಷ ಅಥವಾ 5 ಲಕ್ಷ ಡಾಲರ್ ಖರ್ಚಾಗುತ್ತದೆ. ಈಗಿನ ಕಾಲದ ಜನ ಹಣ ಖರ್ಚು ಮಾಡಲು ಹಿಂದೆ-ಮುಂದೆ ನೋಡುತ್ತಿಲ್ಲವಾದ್ದರಿಂದ ಸಂಪಾದನೆಯೂ ಜಾಸ್ತಿಯಾಗಿರುವುದರಿಂದ ಇದೂ ಒಂದು ರೀತಿಯ ಫ್ಯಾಷನ್ ಶುರುವಾಗಿದೆ. ಇದರಿಂದ ಜನ ತಮ್ಮ ಪ್ರತಿಷ್ಠೆ ಹೆಚ್ಚಲಿದೆ ಎಂದು ಭಾವಿಸಿದರೆ, ಸಂಸ್ಥೆಗಳು ವ್ಯಾಪಾರ ಜಾಸ್ತಿಯಾಗಲಿದೆ ಎಂದು ಭಾವಿಸಿವೆ. ಭಾರತಕ್ಕೂ ಈ ಟ್ರೆಂಡ್ ಬರಲಿದೆ.

**ಹೋಟೆಲ್‌ನಲ್ಲಿ ದೇವಸ್ಥಾನದ ತೆಂಗಿನಕಾಯಿ (27 ಜೂನ್ 08 : ಪಿಟಿಐ) ಅಹಮದಾಬಾದ್ :** ಸಿದ್ಧ ಆಹಾರ ಮಾರಾಟ ಮಳಿಗೆಗಳು ಕಾಯಿ ಚಟ್ನಿಯನ್ನು ಹೋಟೆಲ್‌ಗಳಿಗೆ ಮಾರುವುದನ್ನೇ ದಂಧೆಯನ್ನಾಗಿ ಮಾಡಿಕೊಂಡಿವೆ. ಆದರೆ ಕಾಯಿಯನ್ನು ಅವರು ಕಡಿಮೆ ಬೆಲೆಗೆ ದೇವಸ್ಥಾನಗಳಿಂದ ತಂದು ಚಟ್ನಿ ತಯಾರಿಸಿ ಹೋಟೆಲ್‌ಗಳಿಗೆ ಮಾರುತ್ತಾರೆ. ಇಲ್ಲಿನ ಜನ

ಚಟ್ನಿಯನ್ನು ಇಷ್ಟಪಟ್ಟಿರುವುದರಿಂದ ಅದಕ್ಕೆ ಬೇಡಿಕೆ ಯಾವಾಗಲೂ ಇದೆ. ಭಕ್ತರು ಪೂಜೆಗೆ ಒಂದು ಕಾಯಿಯನ್ನು ಕೊಟ್ಟರೆ, ಅರ್ಧ ಭಕ್ತರಿಗೆ, ಇನ್ನರ್ಧ ಹೋಟೆಲ್‌ಗಳಿಗೆ. ಗುಜರಾತಿ ಜನ ಧಾರ್ಮಿಕ ಮನೋಭಾವದವರು. ಅವರು ರುಚಿಗಾಗಿ ಹಾಗೂ ಭಕ್ತಿಗಾಗಿ ಚಟ್ನಿಯನ್ನು ಊಟ–ತಿಂಡಿಗಳಿಗೆ ಹಾಕಿಕೊಂಡು ತಿನ್ನುತ್ತಾರೆ. ಭಾನುವಾರ 50000 ತೆಂಗಿನ ಹೋಳುಗಳನ್ನು ರಿಯಾಯಿತಿ ದರದಲ್ಲಿ ಮಾರಲಾಗುತ್ತಿದೆ ಎಂದು ದೇವಸ್ಥಾನದ ಅರ್ಚಕರು ಹೇಳುತ್ತಾರೆ. ಸ್ವಲ್ಪ ಆದಾಯವೂ ಇದೆ ಎಂದರು.

**ಲಂಚದ ಗಳಿಕೆ : ಪೋಲೀಸರೇ ನಂಬರ್ 1 (29 ಜೂನ್ 08 : ಪಿಟಿಐ) ದೆಹಲಿ :** ಕಾನೂನು ಕಾಪಾಡಬೇಕಾದ ಪೋಲೀಸರೇ ಭ್ರಷ್ಟಾಚಾರದಲ್ಲಿ ನಂಬರ್ 1 ಆಗಿದ್ದಾರೆ. ಇದು ಜನರಿಗೆ ಮಾಮೂಲು ಸುದ್ದಿಯೇ ಆದರೂ ಈಗ ಅದು ದಾಖಲೆಯೇ ಆಗುತ್ತಿದೆ ! ಬಡತನದ ರೇಖೆಗಿಂತಲೂ ಕೆಳಗಿರುವ ಜನ ಪೋಲೀಸರಿಗೆ ಕೊಡುವ ಲಂಚದ ಹಣ 9000 ಕೋಟಿ ರೂಪಾಯಿ ದಾಟುತ್ತದೆ. 11 ಸರ್ಕಾರಿ ಸೇವೆಗಳನ್ನು ಗಮನದಲ್ಲಿಟ್ಟುಕೊಂಡು **Transparency International Media Studies Research Centres** ಈ ವರದಿ ನೀಡಿದೆ. ರೇಷನ್ – ಆರೋಗ್ಯ – ಪೋಲೀಸ್ – ಶಿಕ್ಷಣ – ವಿದ್ಯುತ್ – ನೀರು – ರಿಜಿಸ್ಟ್ರೇಷನ್ – ರೆವೆನ್ಯೂ – ಬ್ಯಾಂಕಿಂಗ್ – ಹೌಸಿಂಗ್ ಕ್ಷೇತ್ರಗಳನ್ನು ಸಮೀಕ್ಷೆ ಮಾಡಿದೆ. (1) 2007ರಲ್ಲಿ ಜನ 9000 ಕೋಟಿಗೂ ಹೆಚ್ಚು ಹಣವನ್ನು ಪೋಲೀಸರಿಗೆ ನೀಡಿದ್ದಾರೆ. (2) ಪೋಲೀಸರು ಎಲ್ಲರಿಗಿಂತ ಮುಂದಿದ್ದಾರೆ (3) ರೆವೆನ್ಯೂಗೆ 2ನೇ ಸ್ಥಾನ. 35 ಲಕ್ಷ ಜನ ಜಮೀನು ರಿಜಿಸ್ಟ್ರೇಷನ್‌ಗಾಗಿ 122 ಕೋಟಿ ರೂಪಾಯಿ ಲಂಚ ಕೊಟ್ಟಿದ್ದಾರೆ. (3) 3ನೇ ಸ್ಥಾನ ರೇಷನ್‌ಗೆ. 22728 ಜನ ಮಾಹಿತಿ ನೀಡಿದ್ದಾರೆ. ರೇಷನ್ ಕಾರ್ಡ್‌ಗಾಗಿ 53 ಲಕ್ಷ ಜನ ಲಂಚ ಕೊಟ್ಟಿದ್ದಾರೆ.

**ವಿಜಯದಶಮಿಗೆ ನ್ಯಾನೋ ಕಾರು (29 ಜೂನ್ 08 : ಯುಎನ್ನೈ) ದೆಹಲಿ :** ಜಗತ್ತಿನ ಅತಿ ಅಗ್ಗದ ಕಾರು ನ್ಯಾನೋ ಕಾರು ವಿಜಯದಶಮಿಯ ಹೊತ್ತಿಗೆ ರಸ್ತೆಗಿಳಿಯುತ್ತದೆ. ಸಿಂಗೂರ್ ಘಟಕದಲ್ಲಿಯೇ ಈ ಕಾರುಗಳು ತಯಾರಾಗುತ್ತಿವೆ. ಉತ್ಪಾದನಾ ವೆಚ್ಚ ಎಷ್ಟೇ ಹೆಚ್ಚಾದರೂ ಅದರ ಬೆಲೆ 1 ಲಕ್ಷ ರೂಪಾಯಿಯೇ ಆಗಿರುತ್ತದೆ ಎಂದು ಟಾಟಾ ಕಂಪನಿ ಹೇಳಿದೆ. ಈ ಕಾರುಗಳು ನಮ್ಮ ಕಾರುಗಳಿಗೆ ಪ್ರತಿಸ್ಪರ್ಧಿಯಲ್ಲವೆಂದು ಮಾರುತಿ ಕಂಪನಿ ಹೇಳಿಕೊಂಡಿದೆ.

**ಬ್ರಿಟನ್‌ನಲ್ಲೂ ರಾಣಿ ಪ್ರಭುತ್ವದ ಮೇಲೆ ವಿರೋಧ (29 ಜೂನ್ 08 : ಬಿಬಿಸಿ) :** ನೇಪಾಳದಲ್ಲಿ ರಾಜ ಪ್ರಭುತ್ವ ಅಂತ್ಯಗೊಂಡಂತೆಯೇ ಬ್ರಿಟನ್ನಿನಲ್ಲಿಯೂ ರಾಣಿಯ ದರ್ಬಾರ್‌ಗೆ ಗತಿ ಕಾಣಿಸಬೇಕೆಂದು ಇಂಗ್ಲೀಷರು ಬಯಸುತ್ತಿದ್ದಾರೆ. ರಾಣಿಯ ಕುಟುಂಬದವರಿಗಾಗಿ ಪ್ರತಿಯೊಬ್ಬರೂ ವರ್ಷಕ್ಕೆ 66 ಪೆನ್ಸ್ (ಅಂದರೆ 56 ರೂಪಾಯಿ) ತೆರಬೇಕಾಗುತ್ತದೆ ಎನ್ನುವ





ಕೋಪವೇ ಇದಕ್ಕೆ ಕಾರಣ (ಒಟ್ಟು 4 ಕೋಟಿ ಪೌಂಡ್). ಇದು ಸಾರ್ವಜನಿಕರ ಹಣದ ದುರುಪಯೋಗವಲ್ಲವೇ ಎಂದು ಕೇಳುತ್ತಿದ್ದಾರೆ. ಅರಮನೆ ರಿಪೇರಿಯಾಗಬೇಕಾಗಿದೆ. ಅದಕ್ಕಾಗಿ ಇನ್ನೂ ಹಣ ಬೇಕು.

**ದೊಡ್ಡ ಶ್ರೀಮಂತ : ಈಗ ಆಗುತ್ತಾನೆ ಮಹಾ ಸಂತ (29 ಜೂನ್ 08 : ರಾಯ್ಟರ್ಸ್) :** ಎಲ್ಲಾ ಬಗೆಯ ಭೋಗ ಭಾಗ್ಯಗಳನ್ನು ತೊರೆದು, ಸಂಪಾದನೆ ಮಾಡಿದ್ದೆಲ್ಲವನ್ನೂ ತ್ಯಾಗ ಮಾಡಿದವರ ಕತೆಗಳು ನೂರಾರು. ಆದರೆ ಅದೇ ರೀತಿಯ ಆದರ್ಶವನ್ನು ಮೆರೆದು ಸುದ್ದಿ ಮಾಡಿದವರೆಂದರೆ ಕಂಪ್ಯೂಟರ್ ದಿಗ್ಗಜ ಬಿಲ್ ಗೇಟ್ಸ್. ಮೈಕ್ರೋ ಸಾಫ್ಟನ್ನು ಇತರರಿಗೆ ಬಿಟ್ಟುಕೊಟ್ಟು, ಧರ್ಮದ ಕಾರ್ಯಗಳಲ್ಲಿ ನಿರತರಾಗಬೇಕೆಂದು ನಿರ್ಧರಿಸಿದ್ದಾರೆ. 28 ಅಕ್ಟೋಬರ್ 1955ರಲ್ಲಿ ಸೀಟಲ್‌ನಲ್ಲಿ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದರು. 1978 ಮೈಕ್ರೋ ಸಾಫ್ಟ್ ಅನ್ನು ಬೆಳೆಸಿ ವಿಶ್ವದ 3ನೇ ಶ್ರೀಮಂತನೆನೆಸಿಕೊಂಡರು. ಬೇಸಿಕ್ ಕಂಪ್ಯೂಟರ್ ಪ್ರೋಗ್ರಾಮಿಂಗ್‌ನಲ್ಲಿ ವಿಶೇಷ ಅಭಿರುಚಿಯೇ ಅವರನ್ನು ಆ ಮಟ್ಟಕ್ಕೆ ಎಳೆಯಿತು. 1994 ಜನವರಿ 1ರಂದು ಮೆಲಿಂಡಾ ಫ್ರೆಂಚ್ ಅವರನ್ನು ವಿವಾಹವಾದರು. 3 ಜನ ಮಕ್ಕಳಿದ್ದಾರೆ. ದುಬಾರಿ ಮನೆಗಳನ್ನು ಖರೀದಿಸುವುದೆಂದರೆ ಸಿಗರೇಟುಗಳನ್ನು ಕೊಂಡಂತೆ ! ಗಾಲ್ಫ್ – ಟೆನಿಸ್ – ಬ್ರಿಜ್ ಆಟಗಳಲ್ಲಿಯೂ ತೀವ್ರ ಆಸಕ್ತಿ. ಗೇಟ್ಸ್ ಕೊಡುವ ತೆರಿಗೆ 1 ವರ್ಷಕ್ಕೆ 10 ಲಕ್ಷ ಡಾಲರ್. 1993–07ರವರೆಗೆ ಫೋರ್ಬ್ಸ್‌ನ ಶ್ರೀಮಂತರ ಪಟ್ಟಿಯಲ್ಲಿ ಮೊದಲನೆಯ ಸ್ಥಾನ. 1999ರಲ್ಲಿ 10100 ಕೋಟಿ ಡಾಲರ್‌ಗಿಂತ ಹೆಚ್ಚು ಗಳಿಸಿದ್ದರು. ಶತ ಕೋಟ್ಯಾಧಿಪತಿ ಎಂದೇ ಮೆರೆದರು. 2000ನೇ ಇಸವಿಯಲ್ಲಿ ಬಿಲ್–ಮೆಲಿಂಡಾ ಗೇಟ್ಸ್ ಟ್ರಸ್ಟ್ ಸ್ಥಾಪನೆ. ಜಗತ್ತಿನ ಆರೋಗ್ಯಕ್ಕೆ ಹಾಗೂ ಶಿಕ್ಷಣಕ್ಕೆ ಹಣ ಖರ್ಚು ಮಾಡಲು ನಿರ್ಧರಿಸಿದರು. ಈ ಟ್ರಸ್ಟ್ ಎಲ್ಲಾ ದೇಶಗಳಿಗೂ ಹಣ ನೀಡುತ್ತಿದೆ.

– ಬಿ. ಎಸ್. ಸತೀಶ್

**ಸಂಪರ್ಕಿಸಿ :**

**ವಧೂ–ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.**

**(P. G. Accommodation Available)**

**ದೂ : 9242803829, 9341413319**